## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಸಿ.ಬಿ.ಕುಂಬಾರ, ಹಿಂದಿನ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಇಂಡಿ, ಇವರ ವಿರುದ್ಧದ ಇಲಾಖಾ ವಿಚಾರಣೆ- ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯವರ ನೇಮಕ ಮಾಡುವ ಬಗ್ಗೆ ಆದೇಶ.

ಓದಲಾಗಿದೆ:-1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ವಿಜಯಪುರ, ಇವರ ಪತ್ರಸಂಖ್ಯೆ:ಜಿಪಂಆ/ಗ್ರಾಪಂ/ಸಿಬ್ಬಂದಿ/ಸಿಆರ್-251/2011-12/16460, ದಿನಾಂಕ: 19.01.2013

2. ಸರ್ಕಾರದ ಸಮ ಸಂಖ್ಯೆಯ ಕಾರಣ ಕೇಳುವ ನೋಟೀಸ್ ದಿನಾಂಕ:27.07.2015

3. ಶ್ರೀ ಸಿ.ಬಿ.ಕುಂಬಾರ, ಹಿಂದಿನ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಇಂಡಿ, ರವರ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ: 31.08.2015

****

**ಪ್ರಸ್ತಾವನೆ:**

ವಿಜಯಪುರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಇಂಡಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯಲ್ಲಿ ದಿನಾಂಕ: 25-11-2011 ರಿಂದ 16-12-2012ರ ವರೆಗೆ ಅಧಿಕ ಪ್ರಭಾರದಲ್ಲಿ ಶ್ರೀ ಸಿ.ಬಿ.ಕುಂಬಾರ, (ಪ್ರಸ್ತುತ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಹಾವೇರಿ,) ಇವರು ಕರ್ತವ್ಯ ನಿರ್ವಹಿಸುತ್ತಿದ್ದಾಗ, ಇಂಡಿ ತಾಲ್ಲೂಕಿನ ಅಗರಖೇಡ ಗ್ರಾಮ ಪಂಚಾಯತದಲ್ಲಿ 2011-12ನೇ ಸಾಲಿನ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಒಟ್ಟು ರೂ. 96.41 ಲಕ್ಷ ಅನುದಾನ ಮಂಜೂರಾಗಿದ್ದು, ಈ ಪೈಕಿ ನಗದು ಪುಸ್ತಕದ ಪ್ರಕಾರ ರೂ. 69.53 ಲಕ್ಷ ವಿನಿಯೋಗವಾಗಿ ರೂ. 26.88 ಲಕ್ಷ ಮೊತ್ತ ಶಿಲ್ಕು ಇದ್ದರೂ, MIS ನಲ್ಲಿ ಸರಿಯಾದ ಮಾಹಿತಿಯನ್ನು ಅಳವಡಿಸಿದೆ ಇದ್ದುದರಿಂದ, ರೂ. 38.73 ಲಕ್ಷ ವ್ಯತ್ಯಾಸ ಕಂಡುಬಂದಿದ್ದು, ಅಗರಖೇಡ ಗ್ರಾಮ ಪಂಚಾಯತದಲ್ಲಿ ಅನುಷ್ಠಾನಗೊಳ್ಳುತ್ತಿರುವ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಸರಿಯಾಗಿ ಮೇಲ್ವಿಚಾರಣೆ ಮಾಡದೇ ಇರುವುದರಿಂದ (ರೂ.38.73 ಲಕ್ಷ) ವಿನಿಯೋಗಿಸಿದ ಅನುದಾನದ ಮಾಹಿತಿ MIS ನಲ್ಲಿ ಅಳವಡಿಸಲು ಕ್ರಮ ಕೈಗೊಳ್ಳದೆ ಇದ್ದ ಆರೋಪಕ್ಕಾಗಿ ಹಾಗೂ ಅಗರಖೇಡ ಗ್ರಾಮ ಪಂಚಾಯತದಲ್ಲಿ MGNREGA ಯೋಜನೆಯಡಿ 2010-11ನೇ ಸಾಲಿನ ಮೊತ್ತ ರೂ. 84.50 ಲಕ್ಷದ ಪೈಕಿ, ಕೇವಲ ರೂ. 30.42 ಲಕ್ಷ ಕೂಲಿ ಮೊತ್ತದ ವಿವರಗಳನ್ನು ಮಾತ್ರ MIS ನಲ್ಲಿ ಅಳವಡಿಸಿದ್ದು, ಇನ್ನೂ ರೂ. 54.08 ಲಕ್ಷ ಮೊತ್ತದ ಮಾಹಿತಿಯನ್ನು ತಾಲ್ಲೂಕ ಮಟ್ಟದ ಕಾರ್ಯಕ್ರಮ ಅಧಿಕಾರಿಯಾಗಿ, MIS ನಲ್ಲಿ ಅಳವಡಿಸುವಲ್ಲಿ ಸರಿಯಾಗಿ ಮೇಲ್ವಿಚಾರಣೆ ಮಾಡದೆ ಇದ್ದ ಆರೋಪಕ್ಕಾಗಿ ಹಾಗೂ ಇನ್ನಿತರೆ ಆರೋಪ/ ಕರ್ತವ್ಯಲೋಪಗಳಿಗಾಗಿ, ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ ದೋಷಾರೋಪಣ ಪಟ್ಟಿಯೊಂದಿಗೆ ಕಾರಣ

ಕೇಳುವ ನೋಟಿಸನ್ನು ಮೇಲೆ (2) ರಲ್ಲಿ ಓದಲಾದಂತೆ ಜಾರಿ ಮಾಡಲಾಗಿತ್ತು. ಇದಕ್ಕೆ ಅಧಿಕಾರಿಯು ಮೇಲೆ ಓದಲಾದ(3) ರಲ್ಲಿ ಅವರ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಅವರ ವಿರುದ್ಧದ ಎಲ್ಲಾ ಆರೋಪಗಳನ್ನು ಅಲ್ಲಗಳೆಯುತ್ತಾ, ತಮ್ಮ ಮೇಲಿನ ಉದ್ದೇಶಿತ ಇಲಾಖಾ ವಿಚಾರಣೆಯನ್ನು ಕೈಬಿಡುವಂತೆ ಕೋರಿರುತ್ತಾರೆ.

ಈ ಬಗ್ಗೆ ಕೂಲಕಂಷವಾಗಿ ಪರಿಶೀಲಿಸಲಾಗಿ, ಅಧಿಕಾರಿಯ ವಿರುದ್ದ ಆರೋಪಗಳನ್ನು ಕೈಬಿಡಲು ಸ-ಕಾರಣ/ಸಮಂಜಸ/ತೃಪ್ತಿಕರವಾಗಿಲ್ಲದೆ ಇರುವುದರಿಂದ, ಅಧಿಕಾರಿ ವಿರುಧ್ದದ ಆರೋಪಗಳ ಸತ್ಯಾಸತ್ಯೆಯನ್ನು ತಿಳಿಯಲು ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸಲು, ಸರ್ಕಾರವು ತೀರ್ಮಾನಿಸಿದೆ.

ಆದುದರಿಂದ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 109 ಪಬವ 2013 ಬೆಂಗಳೂರು</u>**
**<u>ದಿನಾಂಕ: 26-11-2015</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಇಂಡಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಹುದ್ದೆಯಲ್ಲಿ ದಿನಾಂಕ: 25-11-2011 ರಿಂದ 16-12-2012ರ ವರೆಗೆ ಅಧಿಕ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮೂಲತ: ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ, ಅಂದಿನ ತಾಲ್ಲೂಕು ಯೋಜನಾಧಿಕಾರಿಯಾದ, ಶ್ರೀ ಸಿ.ಬಿ.ಕುಂಬಾರ, (ಪ್ರಸ್ತುತ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಹಾವೇರಿ,) ಇವರ ವಿರುದ್ದ ದಿನಾಂಕ: 27.07.2015ತ ಕಾರಣ ಕೇಳುವ ನೋಟಿಸಿನೊಂದಿಗೆ ಜಾರಿಮಾಡಲಾದ ದೋಷಾರೋಪಣ ಪಟ್ಟಿಯಲ್ಲಿ ಮಾಡಿರುವ ಆರೋಪಗಳ ಸಂಬಂಧ ಇವರ ವಿರುದ್ದ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ), ನಿಯಮಾವಳಿಗಳು 1957ರ ನಿಯಮ 11 ಮತ್ತು 11(ಎ)ರ ಪ್ರಕಾರ ಇಲಾಖಾ ವಿಚಾರಣೆಯನ್ನು ನಡೆಸಲು, ಸದರಿ ನಿಯಮಾವಳಿಗಳ ನಿಯಮ -11 (2) ರನ್ವಯ ಶ್ರೀಫ.ಸಿ.ಗುಡ್ಡಾಕಾರ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಅದೇ ನಿಯಮಾವಳಿಗಳ ನಿಯಮ-11(5)(ಸಿ)ರ ಪ್ರಕಾರ ಸಹಾಯಕ ಕಾರ್ಯದರ್ಶಿ, (ಆಡಳಿತ) ಜಿಲ್ಲಾ ಪಂಚಾಯತ್, ವಿಜಯಪುರ, ಇವರನ್ನು ಮಂಡನಾಧಿಕಾರಿಯನ್ನಾಗಿ ಸರ್ಕಾರವು ನೇಮಿಸಿದೆ.

ವಿಚಾರಣಾಧಿಕಾರಿಯವರು ಈ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ), ನಿಯಮಾವಳಿಗಳು-1957ರ ನಿಯಮ-11ರಲ್ಲಿ ನಿಗಧಿಪಡಿಸಿರುವ ಕಾರ್ಯವಿಧಾನ ಅನುಸರಿಸಿ ವಿಚಾರಣೆ ಜರುಗಿಸಿ ವಿಚಾರಣಾ ವರದಿಯನ್ನು ಅವಶ್ಯಕ ದಾಖಲಾತಿಗಳೊಂದಿಗೆ, ಮೂರು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ನಿಯಮಾನುಸಾರ ಸಂಭಾವನೆಯನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

(ವಿ.ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ವಿಜಯಪುರ
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4) ಶ್ರೀ ಫ.ಸಿ.ಗುಡ್ಡಾಕಾರ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ,
5) ಸರ್ಕಾರದ ಅಧೀನ ಕಾರ್ಯದರ್ಶಿ, ಯೋಜನೆ ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6) ಸಹಾಯಕ ಕಾರ್ಯದರ್ಶಿ,(ಆಡಳಿತ) ಜಿಲ್ಲಾ ಪಂಚಾಯತ್, ಹಾವೇರಿ ಜಿಲ್ಲೆ.

ಪ್ರತಿ ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಉಪ ಕಾರ್ಯದರ್ಶಿ (ಆಡಳಿತ) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.